ಪ್ರಕರಣವನ್ನು ವಾಪಸ್ ತೆಗೆದುಕೊಂಡರು. ಎಲ್ಲರ ಎದುರಿನಲ್ಲಿ ಡ್ರೈವರ್, 'ತಾನು ಹಣದಾಸೆಗೆ ಈ ರೀತಿ ಕೆಲಸ ಮಾಡಿದೆ. ಸಂಬಳ ಹೆಚ್ಚು ಮಾಡಲಿಲ್ಲ ಎಂಬ ಸಿಟ್ಟಿನಿಂದ ಅವರ ಮನೆಯಿಂದ ಐದು ಲಕ್ಷ ಹಣ ಕದ್ದು ಪರಾರಿಯಾಗಿದ್ದೆ. ಆ ಆರೋಪದಿಂದ ತಪ್ಪಿಸಿಕೊಳ್ಳಲು ಒಂದು ನಕಲಿ ಸಿಡಿ ಮಾಡಿ ಮತ್ತೆ ಹಣ ಕೇಳಿದೆ. ಸಾಹೇಬರು ಕರುಣಾಳುಗಳು. ನನ್ನನ್ನು ಕ್ಷಮಿಸಿ ಬಿಡುಗಡೆ ಮಾಡಿಸಿದ್ದಾರೆ...' ಎಂದು ಅತ್ತ. ಅಲ್ಲಿಗೆ ಅವನ ಪಾಲಿಗೆ, ಮಾಧ್ಯಮದವರ ಪಾಲಿಗೆ ಆ ಪ್ರಕರಣ ಮುಗಿದಿತ್ತು.

ಆದರೆ ಶಿವಣ್ಣನ ಪ್ರಶ್ನೆಗೆ ಉತ್ತರ ಸಿಗಲೇ ಇಲ್ಲ. 'ಗೃಹ ಕಾರ್ಯದರ್ಶಿಯವರಿಗೆ ಬ್ಲಾಕ್‌ಮೇಲ್ ಮಾಡಿದಂತಹ ಕೇಸ್... ಇಷ್ಟು ಸುಲಭವಾಗಿ ಮುಗಿಯುವುದೇ... ಅದೂ ಒಂದು ಸಣ್ಣ ತಪ್ಪೊಪ್ಪುಗೆಯಿಂದ?'

ಎಲ್ಲ ಘಟನೆಗಳನ್ನೂ ಒಟ್ಟಾಗಿ ನೋಡಿದರೆ ಅದು ಒಂದು ಮುಗಿದುಹೋದ ಸರಳವಾದ ಪ್ರಕರಣ. ಆದರೆ ಘಟನೆಗಳನ್ನು ಬಿಡಿ ಬಿಡಿಯಾಗಿ ನೋಡಿದರೆ, ಒಂದಕ್ಕೊಂದು ಕೂಡಿಕೊಳ್ಳುವುದಿಲ್ಲ. ಎಲ್ಲಿಯೋ ಒಂದು ಮಿಸ್ಸಿಂಗ್‌ಲಿಂಕ್!! ಕಣ್ಣಿಗೆ ಕಾಣುತ್ತಿರುವುದೇ ಸತ್ಯ ಅಲ್ಲ! ಏನೋ ಮುಚ್ಚಿಟ್ಟು ಹೊರ ಜಗತ್ತಿಗೆ ಬೇರೆ ಏನನ್ನೋ ತೋರಿಸುವ ಪ್ರಯತ್ನ ನಡೆಯುತ್ತಿದೆ.

ಸ್ವತಃ ಗೃಹ ಕಾರ್ಯದರ್ಶಿ ಪೊಲೀಸ್ ಠಾಣೆಗೆ ಬಂದು ದೂರು ಕೊಡುವುದು, ಆ ವಿಚಾರ ಮಾಧ್ಯಮದವರಿಗೆ ತಿಳಿದು ಠಾಣೆ ಮುಂದೆ ಜಮಾವಣೆ ಆಗಿದ್ದು, ಬ್ಲಾಕ್‌ಮೇಲ್ ಕೇಸ್ ಆಗಿದ್ದರೂ ಅದನ್ನು ಕಳ್ಳತನದ ಕೇಸ್ ಎಂದು ಬದಲಾಯಿಸಿ ರಾಜಿಸಂಧಾನದ ಮುಖಾಂತರ ಒಂದೇ ದಿನದಲ್ಲಿ

